ಮಾತೃಭಾಷೆ ತುಳು ಕಲಿತವರೇ ಆಗಿದ್ದಾರೆ. ಕುಂದಾಪುರದಲ್ಲಿ ಕನ್ನಡ ಮಾತನಾಡುವವರು ತುಳುಮಾತನಾಡುವ ಹೆಣ್ಣನ್ನು ತಂದಾಗ ಮಾತೃಭಾಷೆ ತುಳುವೇ ಆಗುತ್ತದೆ. ಕನ್ನಡ ಆಗಲಿಕ್ಕೆ ಆಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ತಮಗೆ ಗೊತ್ತಿದೆ, ಕಾನೂನಿನ ಪ್ರಕಾರ, ಯಾರು ಹೆಂಡತಿಯಾಗಿರುತ್ತಾಳೆ, ಆ ಗಂಡನ ವಂಶದ ಹೆಸರನ್ನು ತೆಗೆದುಕೊಳ್ಳುತ್ತಾಳೆ, ಆ ಆಸ್ತಿಗೆ ಆಕೆ ಹಕ್ಕುದಾರಳಾಗಿರುತ್ತಾಳೆ, ಆಕೆಯ ಭಾಷೆಯನ್ನೇ ನಾವು ಮಾತೃಭಾಷೆ ಎಂದು ಕರೆದರೂ ಕೂಡ ಅದು ತಂದೆ ಭಾಷೆಯೇ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಒಂದು ಮಗುವಿಗೆ ತುಳು ಸರ್ಟಿಫಿಕೇಟ್ ಕೊಟ್ಟಿದ್ದಾರೆ, ಎರಡನೆಯದಕ್ಕೆ ಕೇಳುವಾಗ ಇಲ್ಲ ಸ್ಕೂಲ್ ಸರ್ಟಿಫಿಕೇಟ್‌ನಲ್ಲಿ ಈ ರೀತಿಯಾಗಿದೆ ಎಂದು ಹೇಳುತ್ತಾರೆ. ಅದಕ್ಕೋಸ್ಕರ ಅದನ್ನು ಹೊಂದಾಣಿಕೆ ಮಾಡಬೇಕು. ಏಕೆಂದರೆ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಮದುವೆಯಾದ್ದರಿಂದ ತುಳು ಭಾಷೆಯನ್ನು ಈಗ ಎಲ್ಲರೂ ಕಲಿತಿರುತ್ತಾರೆ, ಮಾತೃಭಾಷೆ ತುಳುವಾಗಿರುತ್ತದೆ. ಅದನ್ನು ಸ್ವಲ್ಪ ಪರಿಗಣಿಸಬೇಕು.

(ಈ) **ವಿಷಯ** :ಉಡುಪಿ ತಾಲ್ಲೂಕಿನ ಕೋಟಾ–ಮಣೂರು ಗ್ರಾಮದಲ್ಲಿ ನಡೆದ ಕೋಮುಗಲಭೆ ಬಗ್ಗೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಕೋಟ ತಟ್ಟು ಪಡುಕೆರೆಯಲ್ಲಿ ಇತ್ತೀಚೆಗೆ ಕೋಮುಗಲಭೆಯಾಯಿತು. ನಿಜವಾಗಿ ಹೇಳಬೇಕಾದರೆ ಅದು ಕೋಮುಗಲಭೆಯಾಗಿ ಆರಂಭವಾಗಲಿಲ್ಲ. ವೈಯಕ್ತಿಕ ದ್ವೇಷದಿಂದ ಒಂದು ಗಲಾಟೆಯಿಂದ ಆರಂಭವಾಯಿತು. ನಂತರ ಅದು ಪರ್ಸನಲ್ ಕ್ಲ್ಯಾಷ್ ಆಗಿ ಕಮ್ಯುನಲ್ ಕ್ಲ್ಯಾಷ್ ಆಯಿತು, ರಾತ್ರಿ 11.00 ಗಂಟೆಯಾಗುವಾಗ ಪೊಲಿಟಿಕಲ್ ಟರ್ನ್ ತೆಗೆದುಕೊಂಡಿತು. ಯಾರಿಗೆ ಯಾರನ್ನು ಕಂಡರಾಗುವುದಿಲ್ಲವೋ ಅವರವರ ಮೇಲೆ ದೂರನ್ನು ಕೊಟ್ಟು ಎರಡು ಮೂರು ದಿವಸಗಳ ಕಾಲ ಅಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು; ಇವತ್ತು ಶಾಂತವಾತಾರಣ ಉಂಟಾಗಿದೆ. ನಾನು ಸರ್ಕಾರವನ್ನು ಕೇಳುವುದೇನೆಂದರೆ, ಯಾವುದೇ ವರ್ಗಕ್ಕೆ ಸೇರಿರಲಿ, ಯಾರ್ಯಾರು ತಪ್ಪಿತಸ್ಥರಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಾಗಬೇಕಾಗುತ್ತದೆ. ಮತ್ತೆ ಕೆಲವು ನಿರಾಪರಾಧಿಗಳ ಮೇಲೆ ರಾಜಕೀಯ ದ್ವೇಷದಿಂದ ಏನು ದೂರನ್ನು ಕೊಟ್ಟಿದ್ದಾರೋ ತನಿಖೆಯನ್ನು ಮಾಡಿ ಅವರ ಮೇಲಿನ ದೂರನ್ನು ತೆಗೆಯಬೇಕು. ತಪ್ಪಿತಸ್ಥರ ಮೇಲೆ ಶಿಕ್ಷೆ ವಿಧಿಸಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ದಿನಾಂಕ 11.06.2006 ರಂದು 20–00 ಗಂಟೆ ಸಮಯಕ್ಕೆ ಕೋಟತಟ್ಟು ಪಡುಕೆರೆಯಲ್ಲಿ ಎರಡು ಸಮುದಾಯದ ಜನರ ನಡುವೆ ಗಲಾಟೆ ನಡೆಯುತ್ತಿದೆ ಎಂದು ಸ್ಥಳೀಯ ದೂರವಾಣಿ ಮುಖಾಂತರ ಕೋಟಾ ಪೊಲೀಸ್ ಠಾಣೆಗೆ ತಿಳಿಸಿದ್ದು, ಕೋಟಾ ಠಾಣಾ ಪಿಎಸ್‌ಐ ಹಾಗೂ ಸಿಬ್ಬಂದಿಯವರು

ಇಲಾಖಾ ವಾಹನದಲ್ಲಿ ಕೋಟಾತಟ್ಟು ಪಡುಕರೆಗೆ ಹೋಗಿ, ಶಬುದ್ದೀನ್ ಎಂಬುವರ ಮನೆಯ ಎದುರು ಸಾರ್ವಜನಿಕ ಸ್ಥಳದಲ್ಲಿ 2 ಕೋಮಿನವರು ಹಿಂದಿನ ದ್ವೇಷದಿಂದ ಕಲ್ಲು ಹಾಗೂ ಸೋಡಾ ಬಾಟಲಿ ಬಿಸಾಡುತ್ತಿರುವುದನ್ನು ನೋಡಿ ಪೊಲೀಸರು ಕಾರ್ಯೋನ್ಮುಖರಾಗಿ ಅವರನ್ನು ಚದುರಿಸಲು ಪ್ರಯತ್ನಿಸಿದರು. ಆದರೂ, ಪ್ರಯೋಜನವಾಗದೇ ಈ ಗುಂಪುಗಳು ಪೊಲೀಸರಿಗೂ ಸಹ ಅವಾಚ್ಯ ಶಬ್ಧಗಳಿಂದ ಬೈದು ಕಲ್ಲು ಹಾಗೂ ಸೋಡಾ ಬಾಟಲಿಯನ್ನು ಬಿಸಾಡಿದ್ದು, ಎರಡೂ ಕೋಮಿನ ಜನರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಜಮಾಯಿಸುವುದನ್ನು ಕಂಡು ಜಿಲ್ಲೆಯ ಅಧಿಕಾರಿ ಹಾಗೂ ಸಿಬ್ಬಂದಿಗಳು ಸದರಿ ಕೋಟಾತಟ್ಟು ಪಡುಕರೆಗೆ ಬಂದು ಎರಡೂ ಗುಂಪಿನವರು ಬಹಳಷ್ಟು ಜನ ಸೇರಿರುವುದರಿಂದ ಶಾಂತಿ ಭಂಗ ಹಾಗೂ ಪ್ರಾಣ ಹಾನಿ ಆಗುವ ಸಂಭವವಿರುವುದನ್ನು ಮನಗಂಡು ಹಲವು ಸಾರಿ ಮುನ್ನೆಚ್ಚರಿಕೆ ನೀಡಿದರು. ಇದರಿಂದ ಕೂಡ, ಪರಿಸ್ಥಿತಿಯು ಹತೋಟಿಗೆ ಬಾರದ ಕಾರಣ ಅಶ್ರುವಾಯು ಪ್ರಯೋಗ ಮಾಡಿದರು. ಆದಾಗ್ಯೂ ಜನರು ಚುದುರದೇ ಇದ್ದುರದಿಂದ ಲಘು ಲಾಠಿ ಪ್ರಹಾರ ಮಾಡಿ ಜನರನ್ನು ಚದುರಿಸಲಾಯಿತು. ಸದರಿ ಘಟನೆಗೆ ಸಂಬಂಧಿಸಿದಂತೆ ಕೋಟಾ ಪೊಲೀಸ್ ಠಾಣೆಯಲ್ಲಿ 12 ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಸ್ಥಳೀಯರಿಗಿಂತ ಹೊರಗಡೆಯಿಂದ ಬಂದು ಜಾಸ್ತಿ ಗಲಾಟೆ ಮಾಡುತ್ತಾರೆ; ಅಂತಹವನ್ನು ಗುರುತಿಸಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಶಾಸಕರು ಹೇಳಿದಂತೆ, ಒಂದೊಂದು ಸಾರಿ ಅಮಾಯಕರು, ಇಂತಹದ್ದರಲ್ಲಿ ಸಿಲುಕಿಹಾಕಿಕೊಳ್ಳುತ್ತಾರೆ, ಅದಾಗಲಾರದಂತಹ ರೀತಿಯಲ್ಲಿ, ಶಾಂತಿ ಭಂಗ ಮಾಡಿದವರು, ಪ್ರಾಣ ಮತ್ತು ಆಸ್ತಿಯನ್ನು ಜಖಂಗೊಳಿಸುವಂತಹ, ಧ್ವಂಸಗೊಳಿಸುವಂತಹ ಕಿಡಿಗೇಡಿಗಳ ಮೇಲೆ ಮಾತ್ರ ನೀವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಇಲಾಖೆಯ ಮುಖ್ಯಸ್ಥರಿಗೆ ಸೂಚನೆಗಳನ್ನು ಕಳುಹಿಸಿಕೊಡುತ್ತೇನೆ.

(ಊ) **ವಿಷಯ** :ಪಾವಗಡ ತಾಲ್ಲೂಕಿನಲ್ಲಿ ಬಿತ್ತನೆ ಬೀಜವನ್ನು ಒದಗಿಸುವ ಬಗ್ಗೆ.

ಶ್ರೀ ತಿಮ್ಮರಾಯಪ್ಪ (ಪಾವಗಡ) : ಮಾನ್ಯ ಅಧ್ಯಕ್ಷರೆ, ನಮ್ಮ ಕೃಷಿ ಇಲಾಖೆಯಿಂದ ನಮಗೇನು ಸಹಾಯಧನವಾಗಿ ಶೇ.75 ಈಗಾಗಲೇ ಸರ್ಕಾರ ಕೊಡುತ್ತಿದೆ, ಅದರ ಬಗ್ಗೆ ಈಗ ನಮಗೆ ಬಂದಿರುವ ವರದಿಯ ಪ್ರಕಾರ ಸರ್ಕಾರ ನಮಗೆ ಕೊಟ್ಟಿರುವ ಸಬ್ಸಿಡಿ ನಾಳೆಗೆ ಕ್ಲೋಸ್ ಆಗುತ್ತಿದೆ, ನಮ್ಮ ಭಾಗದ ರೈತರಿಗೆ ಇನ್ನೂ ಸುಮಾರು 30–40 ಪರ್ಸೆಂಟ್ ರೈತರಿಗೆ ಕೃಷಿ ಬಿತ್ತನೆ ಬೀಜವನ್ನು ಕೊಡಿಸಬೇಕಾಗಿದೆ, ಅಲ್ಲಿನ ಅನೇಕ ಜನ ರೈತರು ಸಂಕಷ್ಟದಲ್ಲಿದ್ದಾರೆ. ಬಿತ್ತನೆ ಕಾಲ ಸಮೀಪಿಸಿರುವುದರಿಂದ ಅವರಿಗೆ ಬಿತ್ತನೆ ಬೀಜ ಬೇಕೆಂದು ಅಲ್ಲಿ ಗಲಾಟೆಗಳಾಗುವಂತಹ ಸನ್ನಿವೇಶವಿರುವುದರಿಂದ ಸರ್ಕಾರ ಇನ್ನೂ ಹೆಚ್ಚಿನ ರೀತಿಯಲ್ಲಿ ನಮ್ಮ ತಾಲ್ಲೂಕಿಗೆ ಬಿತ್ತನೆ ಬೀಜವನ್ನು ಸರಬರಾಜು ಮಾಡುವಂತಹ ಕೆಲಸವನ್ನು ಮಾಡಬೇಕೆಂದು ಈ ಮೂಲಕ ನಾನು ಸರ್ಕಾರದಲ್ಲಿ ಮನವಿ ಮಾಡುತ್ತೇನೆ.